ಪದ್ಧತಿಯಲ್ಲಿ ಮದುವೆ ಮಾಡೋಣ' ಎಂದರು. ಸಿದ್ದೇಗೌಡರಿಗೆ ಮಂತ್ರಮಾಂಗಲ್ಯ ಅಂದರೇನು ಎಂಬುದು ಗೊತ್ತಾಗಲಿಲ್ಲ. ನನಗೂ ಗೊತ್ತಿರಲಿಲ್ಲ. ಆದರೆ, ಮಾವನವರು ಹೇಳಿದಂತೆಯೇ ಅವರ ಮಾರ್ಗದರ್ಶನದಲ್ಲೇ ನಮ್ಮ ಮಂತ್ರಮಾಂಗಲ್ಯ ಮದುವೆಯ ಸಿದ್ಧತೆಗಳು ಮುಂದೆ ನಡೆದವು.

ಊರಿನ ಜನ ನಮ್ಮ ಮಂತ್ರಮಾಂಗಲ್ಯ ಪದ್ಧತಿಯ ಮದುವೆಯನ್ನು ನೋಡಲು ನೆರೆದಿದ್ದರು. ನಮ್ಮ ಮಂತ್ರಮಾಂಗಲ್ಯ ಪದ್ಧತಿಯ ಮದುವೆಯ ದಿನ ಮಾವನವರೇ ಮುಂದಾಗಿ ನಿಂತು ತಾವು ನಿತ್ಯ ಪಾರಾಯಣ ಮಾಡುತ್ತಿದ್ದ ಕುಮಾರವ್ಯಾಸ ಭಾರತ ಕಾವ್ಯ, ಶ್ರೀ ರಾಮಾಯಣದರ್ಶನಂ, ರಾಮಕೃಷ್ಣ ಪರಮಹಂಸ, ಶಾರದಾದೇವಿ ಹಾಗೂ ಕುವೆಂಪು ಅವರ ಫೋಟೊಗಳನ್ನು ಇಟ್ಟು, ನನಗೆ ಗಂಡಿನ ಕೈಯಿಂದ ಮಾಂಗಲ್ಯ ಕಟ್ಟಿಸಿ, ಹೂವಿನ ಹಾರ ಬದಲಾಯಿಸಿ ನಮಗೆ ಕುವೆಂಪು ಅವರ ಮಂತ್ರಮಾಂಗಲ್ಯದ ಮಂತ್ರಗಳನ್ನು ಹೇಳಿಕೊಟ್ಟರು. ಅವರು ಹೇಳಿಕೊಟ್ಟಂತೆಯೇ ನಾವಿಬ್ಬರೂ ಒಟ್ಟಾಗಿಯೇ ಹೇಳಿದೆವು. ನಮ್ಮ ಮದುವೆ ಸುಮಾರು ಒಂದು ಗಂಟೆಯಲ್ಲಿ ಮುಗಿದುಹೋಗಿತ್ತು. ಬಂದವರು 'ಇಷ್ಟು ಬೇಗ ಮದುವೆ ಆಗೋಯ್ತಾ?' ಎಂದು ಆಶ್ಚರ್ಯಪಟ್ಟರು. ತಾವೂ ತಮ್ಮ ಮಕ್ಕಳಿಗೆ ಹೀಗೇ ಸರಳವಾಗಿ ಮಂತ್ರಮಾಂಗಲ್ಯ ಮದುವೆ ಮಾಡಬೇಕೆಂದು ಅಂದುಕೊಂಡು ಹೋದರು. ಮಾವನವರ ಸಲಹೆಯಂತೆ ಬಂದ ಜನಗಳಿಗೆಲ್ಲಾ ಉಪ್ಪಿಟ್ಟು, ಕೇಸರಿಬಾತು, ಕಾಫಿ-ಟೀ ಮಾಡಿಸಿದ್ದರು.

ಮಾವನವರು ನನ್ನ ಹೆಸರಿಗೆ ಎರಡು ಎಕರೆ ಹೊಲ, ಎರಡು ಎಕರೆ ಗದ್ದೆ, ಮನೆಯನ್ನೆಲ್ಲಾ ಉಯಿಲು ಬರೆದು, ಇನ್ನುಳಿದ ಒಂದು ಎಕರೆ ಹೊಲವನ್ನು ಭೈರಣ್ಣನಿಗೆ ದಾನಪತ್ರ ಮಾಡಿಕೊಟ್ಟರು. ಸಿದ್ದೇಗೌಡರು, 'ಭೈರಣ್ಣನಿಗೆ ಏಕೆ ಒಂದು ಎಕರೆ ಹೊಲ ದಾನ ಮಾಡಿದ್ದೀರಲ್ಲ' ಅಂಥ ಕೇಳಿದ್ದಕ್ಕೆ ಮಾವ, 'ಮೊದಲು ಆ ಒಂದು ಎಕರೆ ಹೊಲ ಉಬ್ಬು ತಗ್ಗುಗಳಿಂದ ಕೂಡಿದ್ದು ಅಲ್ಲಿ ಏನನ್ನೂ ಬೆಳೆಯಕ್ಕೆ ಆಗಲ್ಲ ಅಂಥ ಬಂಜರು ಬಿಡಲಾಗಿತ್ತು. ಆಗ ನನ್ನ ಜಮೀನನ್ನು ಪಾಲಿಗೆ ಮಾಡಲು ಬಂದ ಭೈರಣ್ಣನೇ ತನ್ನ ಸಂಸಾರದ ಮಕ್ಕಳ ಶ್ರಮನ್ನೆಲ್ಲಾ ಹಾಕಿ ಅದರ ಉಬ್ಬು ತಗ್ಗುಗಳನ್ನೆಲ್ಲಾ ಸಮ ಮಾಡಿ ಈಗ ಅಲ್ಲಿಯೂ ಒಳ್ಳೆ ಬೆಳೆ ಬೆಳೆದು ನನಗೂ ಪಾಲು ಕೊಡುತ್ತ ಬಂದಿದ್ದಾನೆ. ಪ್ರತಿವರ್ಷ ತಪ್ಪದೆ ನನ್ನ ಮನೆಗೆ ಆತ ಬೆಳೆದ ಫಸಲಿನಲ್ಲಿ ಮೋಸ ಮಾಡದೆ ಅರ್ಧಪಾಲು ಕೊಡುತ್ತಿದ್ದಾನೆ. ಅವನು ನಿಜವಾದ ಮಣ್ಣಿನ ಒಕ್ಕಲು ಮಗನಾಗಿದ್ದಾನೆ. ಅವನಿಗೆ ಅನ್ಯಾಯ ಮಾಡಬಾರದು. ಅವನನ್ನು ಈಗ ನನ್ನ ಜಮೀನಿನಿಂದ ಬಿಡಿಸಿದರೆ ಅವನ ಸಂಸಾರ ಬೀದಿಪಾಲಾಗುತ್ತದೆ. ಅದು ಹಾಗೆ ಆಗಬಾರದು. ಆದ್ದರಿಂದ ನಾನು ಅವನಿಗೆ ಆ ಒಂದು ಎಕರೆ ಹೊಲವನ್ನು ಅವನ ಹೆಸರಿಗೇ ದಾನಪತ್ರ ಬರೆದಿದ್ದೇನೆ' ಎಂದು ಮನವರಿಕೆ ಮಾಡಿಕೊಟ್ಟಾಗ ಸಿದ್ದೇಗೌಡರು, 'ನಾವೂ ಮನುಷ್ಯರಲ್ಲವೆ? ನಾವೂ ಬದುಕಬೇಕು, ಬಡವರೂ ಬದುಕಬೇಕು, ಹಕ್ಕಿಪಕ್ಷಿಗಳೂ ಬದುಕಬೇಕು. ಇರಲಿ ಬಿಡಿ, ಒಳ್ಳೆ ಕೆಲಸ ಮಾಡಿದ್ದೀರಿ' ಎಂದು ಅವರು ಮಾವನವರ ತ್ಯಾಗವನ್ನು ಪ್ರಶಂಸಿಸಿದರು. ಸಿದ್ದೇಗೌಡರಿಗೂ ಆಸ್ತಿ, ಒಳ್ಳೆಯ ಮನೆ ಇತ್ತು. ಮಾವನವರೂ ವಿದ್ಯಾವಂತರಲ್ಲದಿದ್ದರೂ ಸಿದ್ದೇಗೌಡರ ಗುಣ, ಸಹಕಾರವನ್ನು ಮೆಚ್ಚಿ ಮಾತನಾಡುತ್ತಿದ್ದರು.

ನನ್ನ ಬದುಕಿನಲ್ಲೂ ಈಗ ಹೊಸ ಅಧ್ಯಾಯ ಆರಂಭವಾಗಿ, ನನ್ನ ಯಜಮಾನರು ಹಾಗೂ ನಾನು ನಮ್ಮ ಮಾವನ ಮನೆಯಲ್ಲಿ ನಮ್ಮ ಜೀವನದ ಆರಂಭದ ಪುಟಗಳನ್ನು ತೆರೆದಿದ್ದೆವು. ನನ್ನನ್ನು ಮೊದಲು ಕೊಟ್ಟಿದ್ದ ಮನೆಯವರು, ನೆಂಟರು, ಬೆಳೆದು ದೊಡ್ಡವರಾಗಿದ್ದ ನನ್ನ ಮೈದುನರೂ ನನ್ನ ಈ ಮದುವೆಗೆ ಬಂದು ಭಾಗವಹಿಸಿ ಸಂತೋಷಪಟ್ಟು, 'ನಮ್ಮ ನೆಂಟಸ್ತನ ಮುಂದುವರಿಯಲಿ, ನಿಮಗೆ ಒಳ್ಳೆಯದಾಗಲಿ' ಎಂದು ಹಾರೈಸಿ ಹೋಗಿದ್ದರು. ಸಿದ್ದೇಗೌಡರ ಮನೆಯವರೂ ನನಗೆ ತುಂಬಾ ಚೆನ್ನಾಗಿ ಹೊಂದಿಕೊಂಡು ಹೋಗುತ್ತಿದ್ದರು. ಅತ್ತೆ ಚೆನ್ನಮ್ಮ ನನಗೆ ಈಗ ತಾಯಿ ಸ್ಥಾನದಲ್ಲಿದ್ದಂತೆ ಭಾಸವಾಗುತ್ತಿದ್ದರೆ ಮಾವ ಹಾಗೂ ಸಿದ್ದೇಗೌಡರು ನನಗೆ ತಂದೆ ಸ್ಥಾನದಲ್ಲಿ ನಿಂತಂತೆ ಕಾಣುತ್ತಿದ್ದರು. ಆದರೆ, ನಡುವೆ ಅಕ್ಕ ಆಗಾಗ ನೆನಪಿಗೆ ಬರುತ್ತಿದ್ದಳು. ಈಗ ಅವಳು ಬದುಕಿದ್ದು ಇದನ್ನೆಲ್ಲಾ ನೋಡಿದ್ದರೆ ಎಷ್ಟು ಸಂತೋಷ ಪಡುತ್ತಿದ್ದಳೋ ಏನೋ! ಅವ್ವ ಬದುಕಿದ್ದರೆ ನನ್ನ ಹೆತ್ತ ಅವಳ ಕರುಳಿಗೂ ಆನಂದವಾಗುತ್ತಿತ್ತೋ ಏನೋ! ನನಗೆ ಈಗ ಮಾವನ ಮುಖದಲ್ಲಿಯೂ ಸಮಾಧಾನದ ಉಲ್ಲಾಸದ ಗೆರೆಗಳು ಕಾಣಿಸುತ್ತಿದ್ದವು.●